# ಸಂಗೀತ ಮತ್ತು ಧರ್ಮ

**ಸಂಗೀತಕ್ಕೆ ಧರ್ಮ ಎಂಬುದಿಲ್ಲ. ಆದ್ದರಿಂದ ಅಭಿಮಾನಿಗಳು ಸಂಗೀತಗಾರರನ್ನು ತಮ್ಮ ಧರ್ಮ– ಜಾತಿಯ ಹೆಸರಿನಲ್ಲಿ ಗುರುತಿಸುವುದೂ ಸರಿಯಲ್ಲ.**

■ ಬೃಂದಾ ಎನ್. ರಾವ್







ಉಸ್ತಾದ್ ಬಿಸ್ಮಿಲ್ಲಾ ಖಾನ್

‘ನರಜನ್ಮ ಬಂದಾಗ, ನಾಲಿಗೆ ಇರುವಾಗ ಕೃಷ್ಣಾ ಎನಬಾರದೇ’!’ ಪುರಂದರ ದಾಸರ ಈ ಕೃತಿಯ ಹಾಡುಗಾರಿಕೆಯ ಧ್ವನಿ ಮುದ್ರಿಕೆಯೊಂದು ವಾಟ್ಸಪ್/ ಫೇಸ್ ಬುಕ್ ಗಳಲ್ಲಿ ತಿರುಗಾಡುತ್ತಿವೆ. ‘ದೇವರಲ್ಲಿ ನಿಜವಾದ ಭಕ್ತಿ, ಪ್ರೀತಿಗಳಿದ್ದಲ್ಲಿ ಎಂತಹ ಅಡೆತಡೆಗಳಿರಲು ಸಾಧ್ಯ?’ ಎಂದು ಮೆಚ್ಚುಗೆಯನ್ನೂ ಸೂಚಿಸಲಾಗುತ್ತಿದೆ. ಅದನ್ನು ಅತ್ಯಂತ ಭಾವಪೂರ್ವಕವಾಗಿ ಹಾಡಿರುವವರು ಉಸ್ತಾದ್ ರಾಯಿಸ್ ಖಾನ್ ಹಾಗೂ ಉಸ್ತಾದ್ ಹಫೀಸ್ ಖಾನ್ ಸಹೋದರರು– ಪ್ರಖ್ಯಾತ ಸಿತಾರ್ ವಾದಕರಾಗಿದ್ದ ಧಾರವಾಡದ ಉಸ್ತಾದ್ ಬಾಲೇಖಾನ್ ಅವರ ಪುತ್ರರು.

★ ★ ★

ಇದನ್ನು ನೋಡುತ್ತಿದ್ದಂತೆಯೇ ಧಾರ್ಮಿಕ ಪೂರ್ವಗ್ರಹಗಳಿಲ್ಲದೆ, ಕೇವಲ ಸೌಹಾರ್ದದಿಂದ ಕೂಡಿದ ದೊಡ್ಡ ಪರಂಪರೆಯೇ ಕಣ್ಮುಂದೆ ನಿಲ್ಲುತ್ತದೆ.

ಪ್ರಖ್ಯಾತ ಮೈಹರ್ ಘರಾನಾದ ಪಿತಾಮಹರಾದ ಹಾಗೂ ಸರೋದ್ ಮೊದಲುಗೊಂಡು 2025 ಸಂಗೀತ ವಾದ್ಯಗಳನ್ನು ಲೀಲಾಜಾಲವಾಗಿ ನುಡಿಸುತ್ತಿದ್ದ ಬಾಬಾ ಅಲ್ಲಾವುದೀನ್ ಖಾನ್ ಸಾಹೇಬರು ತಮ್ಮ ಬೆಳಗಿನ ನಮಾಜ್ ಮುಗಿಸಿ, ಮನೆ ಮಹಡಿ ಹತ್ತಿ ಸನಿಹದಲ್ಲೇ ಕಾಣುತ್ತಿದ್ದ ಬೆಟ್ಟದ ಮೇಲಿನ ಶಾರದಾ ದೇವಿ ದೇವಾಲಯಕ್ಕೆ ಕೈ ಮುಗಿದು ಬರುತ್ತಿದ್ದರಂತೆ. ಸರಸ್ವತಿ, ಕೃಷ್ಣ, ಹನುಮಂತ, ಏಸುಕ್ರಿಸ್ತ ಮುಂತಾದ ಇತರ ಧರ್ಮಗಳ ದೇವತೆಗಳ ಅಲ್ಲದೆ ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರ ಚಿತ್ರಪಟಗಳು ಅವರ ಮನೆಯ ಗೋಡೆಗಳನ್ನು ಅಲಂಕರಿಸಿದ್ದವಂತೆ. ಅವರು ತಮ್ಮ ಮಗಳಿಗೆ ನೀಡಿದ್ದ ಹೆಸರು ಅನ್ನಪೂರ್ಣ ದೇವಿ.

ಹಿಂದೂಸ್ತಾನಿ ಸಂಗೀತದ ಮತ್ತೊಬ್ಬ ದಿಗ್ಗಜ, ಗಾಯಕ ಉಸ್ತಾದ್ ಬಡೇ ಗುಲಾಮ್ ಆಲಿ ಖಾನ್ ಸಾಹೇಬರು ಸತಮ್ಮ ಕಂಚಿನ ಕಂಠದಲ್ಲಿ ಅತ್ಯಂತ ಭಾವಪೂರ್ಣವಾಗಿ ಹಾಡಿರುವ ‘ಹರಿ ಓಂ ತತ್ಸತ್’ ಎಂಬ ಭಕ್ತಿ ಗೀತೆ ಯಾರನ್ನೇ ಆಗಲೀ ಭಾವಪರವಶರನ್ನಾಗಿ ಮಾಡಬಲ್ಲದು. ‘ಮಹದೇವ್ ಮಹೇಶ್ವರ’ ಎಂಬ ಖಯಾಲನ್ನು ಸಹ ಅವರು ಭಕ್ತಿಪೂರ್ವಕವಾಗಿ ರಸವತ್ತಾಗಿ ಹಾಡುತ್ತಿದ್ದರಂತೆ. ಲಾಹೋರ್ ಬಳಿಯ ಗ್ರಾಮವೊಂದರಲ್ಲಿ ಜನಿಸಿದ್ದವರಾದರೂ 1947 ರಲ್ಲಿ ವಿಭಜನೆಯ ನಂತರ ಅವರು ಭಾರತದಲ್ಲಿ ನೆಲೆಸಿದ್ದರು.